**ಎಂ ವಿ ಸಿ 1473/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 02.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಎಸ್ ವಿ ವಕೀಲರಿಂದಃ**

ಕೆಎ-03-ಎಂಇ-6901 ನೋಂದಣಿ ಸಂಖ್ಯೆಯ ಕಾರು ನನ್ನ ವಾಹನಕ್ಕೆ ಹಿಂಬದಿಯಿಂದ ಗುದ್ದಿ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನದಿಂದ ನಾನೇ ಕೆಳಗೆ ಬಿದ್ದು ಅಪಘಾತ ಉಂಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಂದು ಅರುಣ್ ಎಂಬುವವರು ಕೆಎ 05 ಜೆಎನ್ 3913 ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಅರುಣ್ ರವರಿಗೆ ಕೈ ಮತ್ತು ಮಂಡಿಗೆ ತರಚಿದ ಗಾಯಗಳಾಗಿವೆ. ಅರುಣ್ ರವರು ಪರಿಹಾರ ಕೋರಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿಲ್ಲ. ಅರುಣ್ ರವರು ಎಲ್ಲಿ ಚಿಕಿತ್ಸೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಅರುಣ್ ರವರು ಚಿಕಿತ್ಸೆ ಪಡೆದುಕೊಂಡಿರುವ ಸಂಬಂಧ ಗಾಯದ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಅಪಘಾತ ಆದ ದಿನ ಅರುಣ್ ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಆಸ್ಪತ್ರೆಯಲ್ಲಿ ನನ್ನ ಎಂ ಎಲ್ ಸಿ ಆಗಿದೆಯೇ ಹೊರತು ಅರುಣ್ ರವರ ಎಂ ಎಲ್ ಸಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂದು ಅರುಣ್ ರವರು ವಾಹನದಿಂದ ಕೆಳಗಡೆ ಬಿದ್ದಿಲ್ಲ ಮತ್ತು ಅವರಿಗೆ ಯಾವುದೇ ರೀತಿಯ ಗಾಯಗಳು ಆಗಿಲ್ಲದೆ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನೇ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನ ವಾಹನವನ್ನು ನಾನು ಚಾಲನೆ ಮಾಡುತ್ತಿದ್ದ ಕಾರಣ ಅಪಘಾತದಲ್ಲಿ ನನಗೊಬ್ಬನಿಗೆ ಮಾತ್ರ ಗಾಯಗಳಾಗಿವೆ ಎಂದರೆ ನನ್ನ ತಮ್ಮನಿಗೂ ಆಗಿದೆ.

ನನ್ನನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ನನಗೆ ಪ್ರಜ್ಞೆ

ಇತ್ತು ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇದ್ದ ಕಾರಣ ನಾನೇ ಆಸ್ಪತ್ರೆಯಲ್ಲಿ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಯಾವ ವಾಹನದಿಂದ ನನಗೆ ಅಪಘಾತ ಆಗಿದೆ ಎಂದು ವೈದ್ಯರಿಗೆ ನಾನು ಮಾಹಿತಿ ನೀಡಿಲ್ಲ. ವಾಹನದಿಂದ ನಾನೇ ಸ್ವತಃ ಬಿದ್ದಿದ್ದೇನೆ ಎಂದು ವೈದ್ಯರಿಗೆ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಮಾಹಿತಿ ನೀಡಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಕಾರು ನನ್ನ ವಾಹನಕ್ಕೆ ಹಿಂಬದಿಯಿಂದ ಗುದ್ದಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಹಿಂಭಾಗವು ಯಾವುದೇ ರೀತಿಯಲ್ಲಿಯೂ ಜಖಂಗೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಹಿಂಭಾಗದ ಯಾವ ಭಾಗ ಜಖಂಗೊಂಡಿದೆ ಎಂದು ನನಗೆ ಗೊತ್ತಿಲ್ಲ. ನನ್ನ ದ್ವಿಚಕ್ರ ವಾಹನದ ಹಿಂಭಾಗವು ಜಖಂಗೊಂಡಿರದೆ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನದ ಮುಂಭಾಗ ಮಾತ್ರ ಜಖಂ ಆಗಿದೆ ಎಂದರೆ ಸರಿಯಲ್ಲ.

ನನ್ನ ವಾಹನದ ಮುಂಭಾಗದ ಹೆಡ್ ಲೈಟ್, ಎರಡೂ ಇಂಡೀಕೇಟರ್ ಗಳು, ಮುಂಭಾಗದ ಹ್ಯಾಂಡಲ್, ಮಡ್ ಗಾರ್ಡ ಹಾಗೂ ವೀಲ್ ರಿಮ್ ಜಖಂಗೊಂಡಿವೆ ಎಂದರೆ ಹಿಂಭಾಗ ಮತ್ತು ಮುಂಭಾಗ ಎರಡೂ ಕಡೆ ಆಗಿದೆ. ನಾನು ಅಂದು ನನ್ನ ದ್ವಿಚಕ್ರ ವಾಹನವನ್ನು ವಿದ್ಯುತ್ ಕಂಬಕ್ಕೊ ಅಥವಾ ರಸ್ತೆಯ ವಿಭಜಕಕ್ಕೆ ಗುದ್ದಿರುವ ಕಾರಣ ನನ್ನ ದ್ವಿಚಕ್ರ ವಾಹನಕ್ಕೆ ಆ ರೀತಿಯ ಜಖಂಗಳು ಉಂಟಾಗುತ್ತವೆ ಎಂದರೆ ಹಿಂಬದಿಯಿಂದ ಗುದ್ದಿದಾಗ ನನಗೆ ಗೊತ್ತಾಯಿತೇ ಹೊರತು ಮುಂದೆ ಏನು ಆಯಿತು ಎಂದು ನನಗೆ ಗೊತ್ತಿಲ್ಲ.

ನನಗೆ ಪ್ರಜ್ಞೆ ಬಂದ 6 ದಿನಗಳ ನಂತರ ಅಪಘಾತ ಹೇಗೆ ಆಯಿತು ಎಂದು ತಿಳಿದುಕೊಂಡೆ. ಅಪಘಾತ ಆದಾಗ ನನ್ನ ನನ್ನ ದ್ವಿಚಕ್ರ ವಾಹನವನ್ನು ಕಂಬಕ್ಕೆ ಗುದ್ದಿದೆನೋ ಅಥವಾ ರಸ್ತೆಯ ವಿಭಜಕಕ್ಕೆ ಗುದ್ದಿದೆನೋ ಎಂಬುದನ್ನು ನಾನು ಕೇಳಿ ತಿಳಿದುಕೊಳ್ಳಲಿಲ್ಲ. ನಾನು ಆ ದಿನ ವಾಹನವನ್ನು ಓಡಿಸಿಕೊಂಡು ಹೋಗಿ ರಸ್ತೆಯು ವಿಭಜಕಕ್ಕೆ ಗುದ್ದಿದ ಕಾರಣ

ವಾಹನದ ಮುಂಭಾಗ ಮಾತ್ರ ಜಖಂಗೊಂಡಿದೆ ಎಂದರೆ ಸರಿಯಲ್ಲ.

ಕಾರಿನಿಂದ ನನ್ನ ವಾಹನಕ್ಕೆ ಯಾವುದೇ ಅಪಘಾತ ಆಗದೆ ಇದ್ದರೂ ಸಹ ನಾನು ಆ ಕಾರಿನ ಚಾಲಕನ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ವೈದ್ಯರು ಪೊಲೀಸ್ ಠಾಣೆಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಾನೇ ಸ್ವತಃ ಬಿದ್ದು ಅಪಘಾತ ಮಾಡಿಕೊಂಡ ಕಾರಣ ವೈದ್ಯರು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ಎಷ್ಟು ದಿನಗಳ ನಂತರ ಪೊಲೀಸರಿಗೆ ದೂರು ನೀಡಲಾಯಿತು ಎಂದು ನನಗೆ ಮಾಹಿತಿ ಇಲ್ಲ. ಅಪಘಾತ ಆದ 3-4 ದಿನಗಳ ನಂತರ ದೂರು ನೀಡಿದ್ದಾರೆ ಎಂದು ತಿಳಿದುಕೊಂಡೆ. ಅಪಘಾತ ಆದ 5 ದಿನಗಳ ನಂತರ ದೂರು ನೀಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

ವಿಮಾ ಪಾಲಿಸಿಯನ್ನು ಹೊಂದಿರುವ ವಾಹನವನ್ನು ಕೇಸಿನಲ್ಲಿ ಸೇರಿಸುವ ಸಲುವಾಗಿ ದೂರನ್ನು 5 ದಿನ ತಡವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ಕಾರಿನ ಮುಂಭಾಗದಲ್ಲಿ ಯಾವುದೇ ರೀತಿಯ ಜಖಂಗಳು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಅಪಘಾತಪಡಿಸದೆ ಇರುವ ವಾಹನವನ್ನು ನಾನು, ಪೊಲೀಸರು ಹಾಗೂ 1 ನೇ ಎದುರುದಾರರು ಪರಸ್ಪರ ಷರೀಕ್ಕಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ಪುನಃ ಕರೆಯುತಕ್ಕದ್ದು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**

**ಎಂ ವಿ ಸಿ 1473/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಎಸ್ ವಿ ವಕೀಲರಿಂದಃ**

ಆಸ್ಪತ್ರೆಯಲ್ಲಿ ಒಳರೋಗಿಯಾಗಿ 10 ದಿವಸ ಚಿಕಿತ್ಸೆ ಪಡೆದುಕೊಂಡೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಪೊಲೀಸರು ಬಂದು ಅಪಘಾತ ಹೇಗೆ ಸಂಭವಿಸಿತು ಎಂಬ ಬಗ್ಗೆ ಮಾಹಿತಿ ಪಡೆದುಕೊಂಡರೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತ ಆದ 5 ದಿನಗಳ ನಂತರ ನನಗೆ ಪ್ರಜ್ಞೆ ಬಂದಿತು.

ಅಂದು ನನ್ನ ತಲೆಗೆ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು ಎಂದರೆ ಸರಿಯಲ್ಲ. ಅಪಘಾತ ಆದಾಗ ನನಗೆ ಪ್ರಜ್ಞೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. 6 ದಿನ ಆದ ನಂತರ ನನಗೆ ಪ್ರಜ್ಞೆ ಬಂದಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಧರಿಸಿದ್ದಿದ್ದರೆ ನನ್ನ ತಲೆಗೆ ಸಾಮಾನ್ಯ ಸ್ವರೂಪದ ಗಾಯವೂ ಸಹ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ರಸ್ತೆ ವಿಭಜಕಕ್ಕೆ ಗುದ್ದಿದ್ದ ಕಾರಣ ನನ್ನ ಎಡಭುಜ ಮುರಿದು ಹೋಗಿದೆ ಎಂದರೆ ಸರಿಯಲ್ಲ. ನನ್ನ ಬಲಭುಜಕ್ಕೂ ಸಹ ಸಾಮಾನ್ಯ ಸ್ವರೂಪದ ಗಾಯವಾಗಿತ್ತು ಎಂದರೆ ಸರಿ. ನನ್ನ ಅಪಘಾತದಲ್ಲಿ ನನಗೆ ಆದ ಗಾಯಗಳಿಗೆ ಚಿಕಿತ್ಸೆ ಪಡೆಯಲು ಭರಿಸಿದ ವೆಚ್ಚವನ್ನು ಮರಳಿ ಪಡೆಯಲು ಮತ್ತು ನ್ಯೂನತೆ ಪರಿಹಾರ ಪಡೆಯುವ ಸಲುವಾಗಿ ಅಪಘಾತದಲ್ಲಿ ಒಳಗೊಳ್ಳದೆ ಇರುವ ವಿಮೆ ಹೊಂದಿರುವ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿಯೇ ಅರುಣ್‌ರವರು ದೂರನ್ನು 6 ದಿನ ತಡವಾಗಿ ಪೊಲೀಸ್ ಠಾಣೆಯಲ್ಲಿ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ವಾಹನದಿಂದ ಅಪಘಾತ ಸಂಭವಿಸಿದೆ ಇದ್ದರೂ ಸಹ ನಾನು, ಪೊಲೀಸರು ಮತ್ತು 1 ನೇ ಎದುರುದಾರರು ಪರಸ್ಪರ ಷರೀಕ್ಕಾಗಿ ಕಾರಿನ ಚಾಲಕನ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿ ತಂದಿದ್ದೇವೆ ಎಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ವೈದ್ಯರು ನೀಡಿದ ಚಿಕಿತ್ಸೆಯನ್ನು ಪಡೆದುಕೊಂಡು ಈಗ ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದೇನೆ. ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಹೊರರೋಗಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. 01.10.2024 ರಿಂದ ಇಲ್ಲಿಯವರೆಗೆ ಸುಮಾರು 10 ಬಾರಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ನಾನು ಸಂಪೂರ್ಣವಾಗಿ ಗುಣಮುಖನಾಗಿರುವ ಕಾರಣ ಯಾವುದೇ ಹೊರರೋಗಿ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ದೈನಂದಿನ ಕೆಲಸಗಳನ್ನು ಮಾಡುತ್ತಿದ್ದರೂ ಸಹ ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ರೈತನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಅಂಗಡಿ ವ್ಯಾಪಾರ ಮಾಡುತ್ತಿಲ್ಲ. ನನಗೆ ತಿಂಗಳಿಗೆ ರೂ.30 ಸಾವಿರ ಬರುತ್ತಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅಪಘಾತ ಆದಾಗ ನನಗೆ ಸುಮಾರು 32 ವರ್ಷ ವಯಸ್ಸು ಆಗಿತ್ತು. ಅಪಘಾತ ಆದಾಗ ನನಗೆ 36 ವರ್ಷ ವಯಸ್ಸು ಆಗಿತ್ತು ಎಂದರೆ ಅಂದಾಜು ಇರಬಹುದು. ಕಾರು ನನನ್ನ ವಾಹನಕ್ಕೆ ಹಿಂಬದಿಯಿಂದ ಗುದ್ದದೆ ಇರುವ ಕಾರಣ ವಿಮಾ ಕಂಪನಿಯವರು ನನಗೆ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**